**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ**

**ಕೆ.ಆರ್.ನಗರ**

**ಸಿ ಮಿಸ್ 476/2023**

ಪಿ ಡಬ್ಲ್ಯೂ-1

**ದಿನಾಂಕ 13-10-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಶ್ರೀ ಬಿ ಎನ್ ಬಿ ಎದುರುದಾರರ ಪರ ವಕೀಲರುಃ**

ನಾನು 10 ನೇ ತರಗತಿಯವೆರೆಗೆ ವ್ಯಾಸಂಗ ಮಾಡಿದ್ದೇನೆ. ನಮ್ಮ ತಂದೆ ಸರ್ಕಾರಿ ಶಿಕ್ಷಕರಾಗಿದ್ದರು. ನಮ್ಮ ತಂದೆ ಮೃತ ಪಟ್ಟ ನಂತರ ನಮ್ಮ ತಾಯಿಗೆ ಅನುಕಂಪದ ಆಧಾರದ ಮೇಲೆ ಸರ್ಕಾರಿ ಕೆಲಸ ದೊರಕಿದೆ ಎಂದರೆ ಸರಿ. ಅವರ ಮಾಸಿಕ ವೇತನ 30 ಸಾವಿರ. ನಮ್ಮ ತಂದೆಗೆ 4 ಎಕರೆ ಗದ್ದೆ ಮತ್ತು ಒಂದು ಮನೆ ಪಿತ್ರಾರ್ಜಿತವಾಗಿ ಬಂದಿದೆ ಎಂದರೆ ಸರಿಯಲ್ಲ.

2. ನಮ್ಮ ತಂದೆಯ ಪಿತ್ರಾರ್ಜಿತ ಆಸ್ತಿಯಿಂದ ಬಂದ ಆದಾಯ ಮತ್ತು ನಮ್ಮ ತಾಯಿಯ ಸರ್ಕಾರಿ ನೌಕರಿಯ ಆದಾಯ ಮತ್ತು ನಮ್ಮ ತಂದೆಯ ಪಿಂಚಣಿಯಿಂದ ನಾವು ಐಶಾರಾಮಿಯ ಜೀವನವನ್ನು ನಡೆಸುತ್ತಿದ್ದೇವೆ ಎಂದರೆ ಸರಿಯಲ್ಲ. ನಾನು ಮದುವೆಯ ನಂತರ ಎದುರುದಾರರ ಜೊತೆ 1 ½ ವರ್ಷಗಳ ಕಾಲ ಜೀವನವನ್ನು ನಡೆಸಿ ಎದುರುದಾರರಿಗೆ ಮೈಸೂರು ಮತ್ತು ಕೆ ಆರ್ ನಗರದಲ್ಲಿ ಮನೆ ಮಾಡುವಂತೆ ಒತ್ತಡವನ್ನು ಹೇರುತ್ತಿದ್ದೇನು ಎಂದೆರ ಸರಿಯಲ್ಲ.

3. ಎದುರುದಾರರು ಅವರ ವಯಸ್ಸಾದ ತಂದೆತಾಯಿಯನ್ನು ನೋಡಿಕೊಳ್ಳುವ ಕಾರಣದಿಂದ ಅವರು ಬೇರೆ ಮನೆ ಮಾಡಲು ಒಪ್ಪಿಕೊಂಡಿರುವುದಿಲ್ಲ ಎಂದೆರ ಸರಿಯಲ್ಲ. ಆ ಕಾರಣದಿಂದ ನಾನು ಎದುರುದಾರರ ವಿರುದ್ಧ ಮುನಿಸಿಕೊಂಡು ನಮ್ಮ ತಾಯಿಯ ಮನೆಯಲ್ಲಿ ವಾಸವಾಗಿದ್ದೇನೆ ಎಂದರೆ ಸರಿಯಲ್ಲ. ಎದುರುದಾರರು ಕೆ ಎಸ್ ಆರ್ ಟಿ ಸಿ ಯಲ್ಲಿ ಚಾಲಕ/

ನಿರ್ವಾಹಕನಾಗಿ ಕೆಲಸ ಮಾಡುವುದನ್ನು ಬಿಟ್ಟು ಬೇರೆ ಯಾವುದೇ ಆದಾಯ ಮೂಲ ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಮನೆ ಮತ್ತು ನಿವೇಶನ ಇದೆ ಎಂದು ತಿಳಿಸಿರುತ್ತಾರೆ. ಸದರಿ ಮನೆ ಮತ್ತು ನಿವೇಶನದ ಕುರಿತು ದಾಖಲೆಯನ್ನು ನೀಡಿರುವುದಿಲ್ಲ ಅದರೆ ಎದುರುದಾರರೇ ತಿಳಿಸಿರುತ್ತಾರೆ.

4. ಒಂದು ಮನೆ ಇದ್ದು ಸದರಿ ಮನೆಯನ್ನು ಅವರ ತಂದೆ ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಎದುರುದಾರರರಿಗೆ ಒಬ್ಬ ಅಕ್ಕ ಇದ್ದಾರೆ. ಎದುರುದಾರರರಿಗೆ ಮಾಸಿಕ 20 ಸಾವಿರ ಸಂಬಳ ಎಂದರ ಸರಿಯಲ್ಲ. ಅವರಿಗೆ 35 ಸಾವಿರ ಸಂಬಳ ಬರುತ್ತದೆ. ನಮ್ಮ ತಾಯಿಗೆ ಮಾಸಿಕ 60 ರಿಂದ 70 ಸಾವಿರ ಸಂಬಂಳ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಎದುರುದಾರರ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶವನ್ನು ಕೋರಿದ್ದು ಕಾಲಾವಕಾಶವನ್ನು ನೀಡಲಾಯಿತು.

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇದೆ ಎಂ

**(ಚಂದನ್.ಎಸ್)**
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ